# ಅಮ್ಮನ ಖುಷಿಗೆ ನಟನಾದೆ

**ಅಭಿಜಿತ್ ಸಿಂಗ್**
ಉದಯದ
‘ಸೇವಂತಿ’ಯ ಅಶ್ವಿನ್
ಪ್ರತಾಪ ಸಿಂಹ



◆ **ನಿಮ್ಮ ಪರಿಚಯವನ್ನು ಮಾಡಿ ಕೊಡಿ**

ಗಂಗಾವತಿ ಮೂಲದವನು. ಓದಿದ್ದು ಬಿಇ ಮೆಕಾನಿಕಲ್, ವಿಪ್ರೊ ಕಂಪನಿಯಲ್ಲಿ ಮೂರು ವರ್ಷ ಕೆಲಸ ಮಾಡಿದೆ. ನಟನೆ ನನಗೆ ಒಂದು ರೀತಿಯ ಪ್ಯಾಶನ್. ಅದು ನನ್ನಲ್ಲಿ ಹುಟ್ಟಿದ್ದು ಡಾನ್ಸ್ ಪ್ರೇಮದಿಂದ. ಪ್ರೌಢ ಶಾಲೆಯಲ್ಲಿ ಓದುವಾಗಲೇ ಡಾನ್ಸ್ ಮೋಡಿಗೆ ಒಳಗಾಗಿದ್ದೆ. ಅದಕ್ಕಾಗಿ ಯಾವುದೇ ತರಬೇತಿಯನ್ನೇನೂ ಪಡೆದಿರಲಿಲ್ಲ. ಆದರೂ ಗಂಭೀರವಾಗಿ ಅಭ್ಯಾಸ ಮಾಡುತ್ತಿದ್ದೆ. ನಮ್ಮದೇ ಗೆಳೆಯರ ತಂಡವೊಂದನ್ನು ಕಟ್ಟಿಕೊಂಡು ಪ್ರದರ್ಶನವನ್ನು ನೀಡುತ್ತಿದ್ದೆ. ಪಿಯು ಮುಗಿಯುವ ಹೊತ್ತಿಗೆ ಸುಮಾರು ಮೂರು ನೂರು ಪ್ರದರ್ಶನಗಳನ್ನು ನಾವು ನೀಡಿದ್ದೆವು. ಇದರ ಜತೆ ಮಕ್ಕಳಿಗೆ ಡ್ಯಾನ್ಸ್ ಪಾಠ ಮಾಡ್ತಾ ಇದ್ದೆ. ಅದಾದ ಮೇಲೆ ಓದನ್ನು ಮುಗಿಸಿ ಕೆಲಸಕ್ಕೆ ಸೇರಿದ ನಂತರ ಅಭಿನಯದ ಮೋಹ ಬೆಳೆಯಿತು. ನಟನೆಯನ್ನು ಕಲಿಯಬೇಕು ಎಂದು ನಮ್ಮ ಸಂಬಂಧಿಗಳ ‘ಸಿನಿವೇ’ ಎಂಬ ಸಂಸ್ಥೆಯಲ್ಲಿ ಕಲಿತೆ. ಅದಾದ ಮೇಲೆ ಚಿಕ್ಕಪುಟ್ಟ ಪಾತ್ರಗಳನ್ನು ಮಾಡ್ತಾ ಇದ್ದೆ. ಸಿನಿಮಾ ಒಂದರಲ್ಲಿಯೂ ಮಾಡಿದೆ. ಅಷ್ಟರಲ್ಲಿ ‘ಸೇವಂತಿ’ಯಲ್ಲಿ ಅವಕಾಶ ಸಿಕ್ಕಿತು. ಹಾಗಾಗಿ ಕೆಲಸವನ್ನು ಬಿಟ್ಟು ಪೂರ್ಣಾವಧಿ ಕಲಾವಿದನಾಗಿದ್ದೇನೆ.

◆ **ಅಭಿನಯಕ್ಕೆ ಎಂತಹ ಪಾತ್ರ ಬಯಸುತ್ತೀರಿ?**

ಪಾತ್ರ ಅಂದರೆ ನಾಯಕನೇ ಆಗಬೇಕು ಎಂದಲ್ಲ. ಖಳನಾಯಕನೂ ಆಗಬಹುದು. ಪಾತ್ರಕ್ಕೆ ಭಿನ್ನತೆ ಇರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಅದು ಪರ್ಫಾರ್ಮೆನ್ಸ್ ಬಯಸುತ್ತಿರಬೇಕು. ಕೆಲಸದ ಅವಧಿಯಲ್ಲಿಯೂ ಬಿಡುವು ಸಿಕ್ಕರೆ ಕನ್ನಡ ಸಿನಿಮಾಗಳನ್ನು ನೋಡ್ತಾ ಇದ್ದೆ. ನಿತ್ಯವೂ ಬಿಡುವಿನ ಸಮಯ ಅದಕ್ಕಾಗಿ ಮೀಸಲಾಗಿ ಇಡ್ತಾ ಇದ್ದೆ. ಮಾತ್ರವಲ್ಲದೆ ನಾನೂ ಹೀಗೇ ನಟನಾಗಬೇಕು ಎನ್ನುವ ಕನಸನ್ನು ಕಾಣ್ತಾ ಇದ್ದೆ. ನಟನೇ ಆಗಬೇಕು ಎನ್ನುವ ಛಲ ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದಿದೆ. ಒಳ್ಳೊಳ್ಳೆಯ ಪಾತ್ರಗಳಿಗೆ ಜೀವ ತುಂಬುವ ಕೆಲಸವನ್ನು ಮಾಡಬೇಕಾದ ಸವಾಲು ನನ್ನ ಮುಂದಿದೆ. ಸಿನಿಮಾಗಳಲ್ಲಿಯೂ ಮಾಡಬೇಕು. ಅವಕಾಶ ಸಿಕ್ಕರೆ ಟೀವಿಯಲ್ಲೇ ಡ್ಯಾನ್ಸ್ ರಿಯಾಲಿಟಿ ಶೋನಲ್ಲೂ ಒಂದು ಪ್ರಯತ್ನವನ್ನು ಮಾಡಬೇಕು ಎಂದು ಅಂದುಕೊಂಡಿದ್ದೇನೆ.

◆ **ವೃತ್ತಿ ಪಲ್ಲಟ ನಿಮಗೆ ಯಾವ ರೀತಿಯ ಸವಾಲನ್ನು ಒಡ್ಡಿತು?**

ಜಾಬ್ ನನ್ನ ಅಗತ್ಯಗಳನ್ನು ಪೂರೈಸುತ್ತಿತ್ತು. ಅಭಿನಯ ಮನಸಿಗೆ ಖುಷಿಯನ್ನು ಕೊಡ್ತಾ ಇದೆ. ಆರಂಭದಲ್ಲಿ ಆರ್ಥಿಕವಾಗಿ ಲಾಭಕ್ಕಿಂತ ನಷ್ಟವೇ ಹೆಚ್ಚಾಗಿತ್ತು. ಏಕೆಂದರೆ ಮೊದಲು ನಿಗದಿತ ಆದಾಯ ಬರ್ತಾ ಇತ್ತು. ಇಲ್ಲಿ ಅದರ ಪ್ರಮಾಣ ಕಡಿಮೆ ಆಯ್ತು. ನಿತ್ಯವೂ ಕಚೇರಿಗೆ ಹೋಗುತ್ತಿದ್ದೆ. ನನ್ನ ಸಮಯ ಸಮರ್ಪಕವಾಗಿ ವ್ಯಯವಾಗುತ್ತಿತ್ತು. ಟೀವಿಯಲ್ಲಿ ತಿಂಗಳಲ್ಲಿ ಹತ್ತಾರು ದಿನ ಮನೆಯಲ್ಲಿ ಇರುವ ಸನ್ನಿವೇಶ ಎದುರಾಗುತ್ತಿತ್ತು. ಆಗೆಲ್ಲ ಗಲಿಬಿಲಿಯಾಗುತ್ತಿತ್ತು, ಸ್ವಲ್ಪ ಕಷ್ಟವೇ ಆಗುತ್ತಿತ್ತು. ಇಷ್ಟಪಟ್ಟು ಬಂದಿದ್ದೇನೆ. ಕಷ್ಟ ಆದರೂ ಇಲ್ಲೇ ನೆಲೆ ನಿಲ್ಲಬೇಕು ಎನ್ನುವ ಸಂಕಲ್ಪ ಮಾಡಿದೆ. ಈಗ ಹಾಗೆನಿಸುತ್ತಿಲ್ಲ ತುಂಬ ಖುಷಿಯಾಗಿದ್ದೇನೆ. ಬೇರೆ ಬೇರೆ ಅವಕಾಶಗಳೂ ಈಗ ಬರುತ್ತಿವೆ. ನನ್ನನ್ನೂ ಗುರುತಿಸುತ್ತಿದ್ದಾರೆ.

◆ **‘ಸೇವಂತಿ’ಯಲ್ಲಿ ಅವಕಾಶ ಹೇಗೆ ಸಿಕ್ಕಿತು?**

ಅವಕಾಶ ತೀರ ಆಕಸ್ಮಿಕವಾಗಿಯೇ ಸಿಕ್ಕಿದೆ. ಬಣ್ಣದ ಲೋಕದ ಒಡನಾಟದಿಂದ ದೇವು ಎನ್ನುವವರು ಸ್ನೇಹಿತರಾದರು. ಅವರು ನನ್ನ ಫೋಟೊವನ್ನು ಉದಯ ಟೀವಿ ತಂಡಕ್ಕೆ ಕಳುಹಿಸಿದ್ದಾರೆ. ನನ್ನ ಫೋಟೊ ನೋಡಿ ಆಡಿಷನ್‌ಗೆ ನೀಡಲು ನನಗೆ ಫೋನ್ ಮಾಡಿದ್ದರು. ನಾನು ನಿರ್ವಹಿಸುತ್ತಿರುವ ಪಾತ್ರಕ್ಕೆ ನಾನೇ ಸೂಕ್ತ ಎಂದು ನನ್ನ ಫೋಟೊ ನೋಡಿಯೇ ಆಡಿಷನ್‌ಗೆ ಅವಕಾಶ ನೀಡಿದ್ದರು. ನಾನು ಟೀವಿಯಲ್ಲಿ ಬರುವುದು ನನ್ನ ತಾಯಿಗೆ ತುಂಬ ಖುಷಿ ಅದೂ ಕೂಡ ನಟನಾಗಲು ನನಗೆ ಪ್ರೇರಕ ಶಕ್ತಿ. ಅವರ ಆಶೆಯೇ ನನಗೆ ಪ್ರೇರಣೆಯಾಗಿದೆ. ನಾನೊಬ್ಬನೇ ಮಗ, ನನಗೂ ನಟನೆ ಇಷ್ಟ. ಹಾಗಾಗಿ ಇಲ್ಲೇ ನನ್ನನ್ನು ಗುರುತಿಸಿಕೊಳ್ಳುತ್ತೇನೆ.

■ **ರಾಘವೇಂದ್ರ ಕೆ.**